



(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ۝

1. ಅಲಿಫ್ ಲಾಮ್ ರಾ. ದೇವಗ್ರಂಥ ಹಾಗೂ ಸುವ್ಯಕ್ತ ಕುರ್‌ಆನಿನ ಸೂಕ್ತಗಳಿವು.[1]

الٓرٰ تِلْكَ اٰيٰتُ الْكِتٰبِ وَ قُرْاٰنٍ مُّبِيْنٍ ①

2. *ಇಂದು (ಇಸ್ಲಾಮ್ ಧರ್ಮಾಹ್ವಾನವನ್ನು ಸ್ವೀಕರಿಸುವುದರ ಬದಲು) ನಿಷೇಧಿಸಿದವರು ಪಶ್ಚಾತ್ತಾಪದ ಮೇಲೆ ಪಶ್ಚಾತ್ತಾಪ ಪಡುತ್ತ, "ಅಯ್ಯೋ! ನಾವು ಮುಸ್ಲಿಮ(ಶರಣಾಗತ)ರಾಗುತ್ತಿದ್ದರೆ!" ಎನ್ನಲಿರುವ ಆ ಕಾಲ ದೂರವಿಲ್ಲ.

رُبَمَا يَوَدُّ الَّذِيْنَ كَفَرُوْا لَوْ كَانُوْا مُسْلِمِيْنَ ②

3. ಅವರನ್ನು (ಅವರ ಪಾಡಿಗೆ) ಬಿಟ್ಟು ಬಿಡಿರಿ. ತಿಂದುಂಡು ಸುಖೋಪಭೋಗಗಳನ್ನು ಅನುಭವಿಸುತ್ತಲಿರಲಿ. ಹುಸಿ ಭರವಸೆಯು ಇವರನ್ನು ಮರವೆಗೆ ಒಳಪಡಿಸಿರಲಿ- ಸದ್ಯದಲ್ಲೇ ಇವರಿಗೆ ಮನವರಿಕೆಯಾಗುವುದು.

ذَرْهُمْ يَاْكُلُوْا وَ يَتَمَتَّعُوْا وَ يُلْهِهِمُ الْاَمَلُ فَسَوْفَ يَعْلَمُوْنَ ③

4. ನಾವು ಈ ಮುಂಚೆ ನಾಶಗೊಳಿಸಿದ ಪ್ರತಿಯೊಂದು ನಾಡಿಗೂ ಒಂದು ನಿರ್ದಿಷ್ಟ ಕರ್ಮಾವಧಿಯನ್ನು ಲಿಖಿತಗೊಳಿಸಲಾಗಿತ್ತು.

وَمَآ اَهْلَكْنَا مِنْ قَرْيَةٍ اِلَّا وَلَهَا كِتَابٌ مَّعْلُوْمٌ ④

5. ಯಾವ ಜನಾಂಗವೂ ತನಗೆ ನಿಶ್ಚಯಿಸಲ್ಪಟ್ಟ ಕಾಲಕ್ಕಿಂತ ಮುಂಚೆ ನಾಶಗೊಳ್ಳುವುದೂ ಇಲ್ಲ, ಅನಂತರ ಅದು ಉಳಿಯುವುದೂ ಇಲ್ಲ.

مَا تَسْبِقُ مِنْ اُمَّةٍ اَجَلَهَا وَ مَا يَسْتَاْخِرُوْنَ ⑤

الجزء ١٤

1. 'ಮುಬೀನ್' ಎಂಬ ಪದ ಕುರ್‌ಆನಿನ ಗುಣವಿಶೇಷಣದ ರೂಪದಲ್ಲಿ ಬಳಕೆಯಾಗಿದೆ. ಅದರ ಅರ್ಥ ಈ ಸೂಕ್ತಗಳು ತನ್ನ ಇಂಗಿತವನ್ನು ಅತ್ಯಂತ ಸ್ಪಷ್ಟವಾಗಿ ಸಾದರ ಪಡಿಸುವ ಕುರ್‌ಆನಿನದ್ದಾಗಿದೆ ಎಂದಾಗಿದೆ.

***ಇಲ್ಲಿಂದ 14ನೆಯ ಕಾಂಡ ಆರಂಭ.**

6. ಇವರು ಹೇಳುತ್ತಾರೆ, 'ಈ ದಿಕ್ರ್'[2] (ಉಪದೇಶ) ಅವತೀರ್ಣಗೊಂಡವನೇ![3] ಖಂಡಿತವಾಗಿಯೂ ನೀನೊಬ್ಬ ಹುಚ್ಚ.

وَقَالُوْا يٰۤاَيُّهَا الَّذِيْ نُزِّلَ عَلَيْهِ الذِّكْرُ اِنَّكَ لَمَجْنُوْنٌ ؕ ٦

7. ನೀನು ಸತ್ಯವಾದಿಯಾಗಿದ್ದರೆ ನಮ್ಮ ಮುಂದೆ ದೇವಚರರನ್ನೇಕೆ ತರುವುದಿಲ್ಲ?

لَوْ مَا تَاْتِيْنَا بِالْمَلٰٓئِكَةِ اِنْ كُنْتَ مِنَ الصّٰدِقِيْنَ ٧

8. ನಾವು ದೇವಚರರನ್ನು ಸುಮ್ಮನೆ ಇಳಿಸುವುದಿಲ್ಲ. ಅವರು ಇಳಿಯುವಾಗ ಸತ್ಯ ಸಹಿತವಾಗಿಯೇ ಇಳಿಯುತ್ತಾರೆ ಮತ್ತು ಆ ಬಳಿಕ ಜನರಿಗೆ ಕಾಲಾವಕಾಶ ನೀಡಲಾಗುವುದಿಲ್ಲ.[4]

مَا نُنَزِّلُ الْمَلٰٓئِكَةَ اِلَّا بِالْحَقِّ وَمَا كَانُوْۤا اِذًا مُّنْظَرِيْنَ ٨

9. ಈ 'ಉಪದೇಶ'ವನ್ನು ನಿಶ್ಚಯವಾಗಿಯೂ ನಾವು ಅವತೀರ್ಣಗೊಳಿಸಿರುತ್ತೇವೆ ಮತ್ತು ಸ್ವತಃ ನಾವೇ ಅದರ ರಕ್ಷಕರೂ ಆಗಿರುತ್ತೇವೆ.

اِنَّا نَحْنُ نَزَّلْنَا الذِّكْرَ وَاِنَّا لَهٗ لَحٰفِظُوْنَ ٩

10. ಓ ಪೈಗಂಬರರೇ, ನಾವು ನಿಮಗಿಂತ ಮುಂಚೆ ಗತಿಸಿಹೋದ ಅನೇಕ ಜನಾಂಗಗಳಲ್ಲಿ ಸಂದೇಶವಾಹಕರನ್ನು ಕಳುಹಿಸಿದ್ದೇವೆ.

وَلَقَدْ اَرْسَلْنَا مِنْ قَبْلِكَ فِيْ شِيَعِ الْاَوَّلِيْنَ ١٠

11. ಅವರ ಬಳಿಗೆ ಬಂದಿದ್ದ ಸಂದೇಶವಾಹಕರನ್ನು ಅವರು ಎಂದೂ ಅಪಹಾಸ್ಯ ಮಾಡದೆ ಇರಲಿಲ್ಲ.

وَمَا يَاْتِيْهِمْ مِّنْ رَّسُوْلٍ اِلَّا كَانُوْا بِهٖ يَسْتَهْزِءُوْنَ ١١

12. ನಾವು ಈ ಉಪದೇಶವನ್ನು ಅಪರಾಧಿಗಳ ಹೃದಯದೊಳಗೆ ಇದೇ ರೀತಿಯಲ್ಲಿ (ಸಲಾಕೆಯಂತೆ) ಹಾಯಿಸುತ್ತೇವೆ.[5]

كَذٰلِكَ نَسْلُكُهٗ فِيْ قُلُوْبِ الْمُجْرِمِيْنَ ۙ ١٢

2. 'ದಿಕ್ರ್' ಎಂಬ ಪದ ಕುರ್‌ಆನಿನಲ್ಲಿ 'ಅಲ್ಲಾಹನ ವಚನ'ಕ್ಕೆ ಬಳಕೆಯಾಗಿದೆ. ಅದು ಸಾದ್ಯಂತ ಉದ್ಬೋದನೆಗಳೊಂದಿಗೆ ಅವತೀರ್ಣಗೊಳ್ಳುತ್ತದೆ. ಗತ ಪ್ರವಾದಿಗಳ ಮೇಲೆ ಅವತೀರ್ಣಗೊಂಡ ಗ್ರಂಥಗಳೆಲ್ಲವೂ 'ದಿಕ್ರ್'ಗಳಾಗಿದ್ದುವು. ಅಂತೆಯೇ ಈ ಕುರ್‌ಆನ್ ಕೂಡ 'ದಿಕ್ರ್' ಆಗಿದೆ. ದಿಕ್ರ್‌ನ ಮೂಲ ಅರ್ಥ ನೆನಪಿಸುವುದು, ಎಚ್ಚರಗೊಳಿಸುವುದು ಮತ್ತು ಬೋಧನೆ ಕೊಡುವುದು ಎಂದಾಗಿದೆ.

3. ಈ ವಾಕ್ಯವನ್ನು ಅವರು ಅಣಕದ ರೂಪದಲ್ಲಿ ಹೇಳುತ್ತಿದ್ದರು. ಈ 'ದಿಕ್ರ್' ಪ್ರವಾದಿವರ್ಯರ(ಸ) ಮೇಲೆ ಅವತೀರ್ಣಗೊಂಡಿದೆ ಎಂಬ ಬಗ್ಗೆ ಅವರಿಗೆ ಒಪ್ಪಿಗೆಯೇ ಇರಲಿಲ್ಲ. ಅದನ್ನು ಅವರು ಸಮ್ಮತಿಸಿದ್ದರೆ ಪ್ರವಾದಿವರ್ಯರನ್ನು(ಸ) ಹುಚ್ಚನೆಂದು ಹೇಳಲಿಕ್ಕೂ ಅವರಿಗೆ ಸಾಧ್ಯವಿರಲಿಲ್ಲ. "ನನ್ನ ಮೇಲೆ ದಿಕ್ರ್ ಅವತೀರ್ಣಗೊಂಡಿದೆ ಎಂದು ಹೇಳುತ್ತಿರುವ ಓ ವ್ಯಕ್ತಿಯೇ?" ಎಂದು ಈ ಮೂಲಕ ಅವರು ಹೇಳಬಯಸಿದ್ದರು.

4. ಅರ್ಥಾತ್- ಯಾವುದಾದರೊಂದು ಜನಾಂಗ, "ದೇವಚರರನ್ನು ಕರೆಸಿ" ಎಂದು ಹೇಳಿದಾಕ್ಷಣ ಅವರು ಬಂದು ಪ್ರತ್ಯಕ್ಷವಾಗಲು ದೇವಚರರನ್ನು ಮೋಜಿಗಾಗಿ ಇಳಿಸಲಾಗುವುದಿಲ್ಲ. ದೇವಚರರನ್ನು ಯಾವುದಾದರೂ ಜನಾಂಗದ ಬಗ್ಗೆ ಅಂತಿಮ ತೀರ್ಮಾನ ಮಾಡಬೇಕಾದ ನಿರ್ಣಾಯಕ ಹಂತದಲ್ಲಿ ಕಳುಹಿಸಲಾಗುತ್ತದೆ. "ಸತ್ಯದೊಂದಿಗೆ ಇಳಿಯುತ್ತಾರೆ" ಎಂದರೆ ಸತ್ಯವನ್ನು ಹೊತ್ತುಕೊಂಡು ಇಳಿಯುತ್ತಾರೆ ಎಂದು ಅರ್ಥ. ಅರ್ಥಾತ್ ಅಲ್ಲಾಹನ ದಿಟವಾದ ತೀರ್ಮಾನದೊಂದಿಗೆ ಅವರು ಬರುತ್ತಾರೆ ಮತ್ತು ಅದನ್ನು ಜಾರಿಗೊಳಿಸಿಯೇ ತೀರುತ್ತಾರೆ.

5. ಮೂಲದಲ್ಲಿ 'ನಸ್‌ಲುಕುಹು' ಎಂಬ ಪದ ಪ್ರಯೋಗವಾಗಿದೆ. ಸಲಕ್ ಎಂದರೆ ಅರಬಿ ಭಾಷೆಯಲ್ಲಿ ಯಾವುದಾದರೂ ವಸ್ತುವನ್ನು ಇನ್ನೊಂದರ ಮೂಲಕ ಸಾಗಿಸುವುದು, ಹಾಯಿಸುವುದು ಅಥವಾ ಪೋಣಿಸುವುದು ಎಂದಾಗಿದೆ. ನೂಲನ್ನು ಸೂಜಿಯ ರಂಧ್ರದೊಳಗೆ ಪೋಣಿಸುವಂತೆ. ಒಟ್ಟಿನಲ್ಲಿ ಈ ಸೂಕ್ತದ ಅರ್ಥವೇನೆಂದರೆ ಸತ್ಯವಿಶ್ವಾಸಿಗಳ ಮೇಲೆ ಈ ದಿಕ್ರ್ ಹೃದಯದ ಶಾಂತಿ ಮತ್ತು ಆತ್ಮದ

13. ಅವರು ಇದರ ಮೇಲೆ ವಿಶ್ವಾಸವಿರಿಸುವುದಿಲ್ಲ. ಇಂತಹವರ ವರ್ತನೆಯು ಪೂರ್ವಕಾಲದಿಂದಲೂ ಹೀಗೆಯೇ ನಡೆದು ಬರುತ್ತಿದೆ.

لَا يُؤْمِنُونَ بِهٖ وَقَدْ خَلَتْ سُنَّةُ الْاَوَّلِيْنَ ﴿۱۳﴾

14. ನಾವು ಅವರಿಗೆ ಆಕಾಶದ ದ್ವಾರವೊಂದನ್ನು ತೆರೆದು, ಅವರು ಹಾಡುಹಗಲಲ್ಲೇ ಅದರ ಮೇಲೆ ಏರಲು ತೊಡಗುತ್ತಿದ್ದರೆ-

وَلَوْ فَتَحْنَا عَلَيْهِمْ بَابًا مِّنَ السَّمَآءِ فَظَلُّوْا فِيْهِ يَعْرُجُوْنَ ﴿۱۴﴾

15. ಅವರು ನಮಗೆ ಕಣ್ಣು ಕಟ್ಟು ಮಾಡಲಾಗಿದೆ ಎಂದಷ್ಟೆ ಅಲ್ಲದೆ ನಮಗೆ ಮಾಟಮಾಡಲಾಗಿದೆಯೆಂದೂ ಹೇಳುತ್ತಿದ್ದರು.

لَقَالُوْٓا اِنَّمَا سُكِّرَتْ اَبْصَارُنَا بَلْ نَحْنُ قَوْمٌ مَّسْحُوْرُوْنَ ﴿۱۵﴾

16. ಆಕಾಶಗಳಲ್ಲಿ ಅನೇಕ ಬುರುಜುಗಳನ್ನೂ ಮಾಡಿರುವುದು ನಾವೇ.[6] ಅವುಗಳನ್ನು ನಾವು ನೋಡುವವರಿಗಾಗಿ (ನಕ್ಷತ್ರಗಳಿಂದ) ಅಲಂಕರಿಸಿರುತ್ತೇವೆ-

وَلَقَدْ جَعَلْنَا فِي السَّمَآءِ بُرُوْجًا وَّزَيَّنّٰهَا لِلنّٰظِرِيْنَ ﴿۱۶﴾

17. ಮತ್ತು ಪ್ರತಿಯೊಬ್ಬ ಧಿಕ್ಕರಿಸಲ್ಪಟ್ಟ ಶೈತಾನನಿಂದ ಅವುಗಳನ್ನು ಕಾಪಾಡಿರುತ್ತೇವೆ.

وَحَفِظْنٰهَا مِنْ كُلِّ شَيْطٰنٍ رَّجِيْمٍ ﴿۱۷﴾

18. ಯಾವ ಶೈತಾನನೂ ಒಂದಿಷ್ಟು ಕದ್ದು ಕೇಳುವ ಹೊರತು[7] ಅವುಗಳಲ್ಲಿ ದಾರಿಗಾಣಲಾರ ಮತ್ತು ಅವನು ಕದ್ದಾಲಿಸಲು ಪ್ರಯತ್ನಿಸುವಾಗ ಒಂದು ಪ್ರಕಾಶಮಯ ಜ್ವಾಲೆಯು ಅವನನ್ನು ಬೆನ್ನಟ್ಟುತ್ತದೆ.[8]

اِلَّا مَنِ اسْتَرَقَ السَّمْعَ فَاَتْبَعَهٗ شِهَابٌ مُّبِيْنٌ ﴿۱۸﴾

ಆಹಾರದ ರೂಪದಲ್ಲಿ ಇಳಿಯುತ್ತದೆ. ಆದರೆ ಅಪರಾಧಿಗಳ ಹೃದಯಕ್ಕೆ ಅದು ಮಿಂಚಿನಂತೆ ನಾಟುತ್ತದೆ. ಅದನ್ನು ಕೇಳಿ ಅವರಲ್ಲಿ ಅಗ್ನಿಜ್ವಾಲೆಗಳೇಳುತ್ತವೆ. ಕಾಯಿಸಿದ ಸಲಾಕೆಯು ಹೃದಯದ ಮೂಲಕ ದಾಟಿ ಹೋಯಿತೋ ಎಂದು ಅವರಿಗೆ ಭಾಸವಾಗುತ್ತದೆ.

6. ಮೂಲದಲ್ಲಿ ಬುರೂಜ್ ಎಂಬ ಪದ ಪ್ರಯೋಗಿಸಲಾಗಿದೆ. 'ಬುರ್ಜ್' ಎಂದು ಅರಬಿ ಭಾಷೆಯಲ್ಲಿ ಕೋಟೆ, ಅರಮನೆ ಅಥವಾ ದೃಢವಾದ ಕಟ್ಟಡಕ್ಕೆ ಹೇಳುತ್ತಾರೆ. ನಂತರದ ವಿಷಯವನ್ನು ಗಮನಿಸಿದರೆ ಪ್ರಾಯಶಃ ಇದನ್ನು ಆಕಾಶ ಲೋಕದ ಪರಸ್ಪರ ಸುದೃಢವಾದ ಸರಹದ್ದುಗಳ ಮೂಲಕ ಪ್ರತ್ಯೇಕಗೊಂಡಿರುವ ವಲಯಗಳ ಬಗ್ಗೆ ಹೇಳಲಾಗಿರಬಹುದೆಂದು ವ್ಯಕ್ತವಾಗುತ್ತದೆ. ಈ ವಿವರಣೆಯ ಆಧಾರದಲ್ಲಿ ಬುರೂಜ್ ಎಂದರೆ 'ಸುರಕ್ಷಿತ ವಲಯಗಳು' ಎಂದು ಅರ್ಥೈಸುವುದು ಅತ್ಯಂತ ಸೂಕ್ತವೆನಿಸುತ್ತದೆ.

7. ಅರ್ಥಾತ್- ತಮ್ಮ ಸಂಗಾತಿಗಳಿಗೆ ಅಗೋಚರ ಸುದ್ದಿಗಳನ್ನು ಮುಟ್ಟಿಸುವ ಶೈತಾನರು. ವಾಸ್ತವದಲ್ಲಿ ಅವರ ಬಳಿ ಅಗೋಚರ ವಿಷಯಗಳನ್ನು ತಿಳಿಯುವ ಯಾವುದೇ ಮಾಧ್ಯಮವಿಲ್ಲ. ಎಲ್ಲಿ ಬೇಕಾದರೂ ಸಂಚರಿಸಿ ಅಲ್ಲಾಹನ ರಹಸ್ಯಗಳನ್ನು ತಿಳಿದುಕೊಳ್ಳಲು ನಿಸರ್ಗ ಅವರ ಮುಂದೆ ಸಂಪೂರ್ಣ ತೆರವುಗೊಂಡಿಲ್ಲ. ಅವರು ಕದ್ದು ಕೇಳಲು ಖಂಡಿತ ಪ್ರಯತ್ನಿಸುತ್ತಾರೆ. ಆದರೆ ವಾಸ್ತವದಲ್ಲಿ ಅವರಿಗೇನೂ ತಿಳಿಯುವುದಿಲ್ಲ.

8. 'ಶಿಹಾಬುಮ್ಮುಬೀನ್'ನ ಶಬ್ದಾರ್ಥ ಪ್ರಕಾಶಮಯ ಜ್ವಾಲೆ ಎಂದಾಗಿದೆ. ಇನ್ನೊಂದೆಡೆ ಕುರ್‌ಆನಿನಲ್ಲಿ ಇದಕ್ಕೆ 'ಶಿಹಾಬೆ ಸಾಕಿಬ್' ಎಂಬ ಪದ ಪ್ರಯೋಗಿಸಲಾಗಿದೆ. ಅರ್ಥಾತ್ ಕತ್ತಲೆಯನ್ನು ಭೇದಿಸುವಂತಹ ಜ್ವಾಲೆ. ಇದರ ಅರ್ಥ ನಾವು ಸಾಮಾನ್ಯವಾಗಿ ಉಲ್ಕೆಗಳು ಎಂದು ಕರೆಯುವ, ಬೀಳುವ ನಕ್ಷತ್ರಗಳು ಎಂದೇ ಆಗಿರಬೇಕಾಗಿಲ್ಲ. ಅವು ಬೇರೆ ರೂಪದ ಕಿರಣಗಳಾಗಿರಲೂಬಹುದು. ಉದಾ: ನಿಸರ್ಗ ಕಿರಣಗಳು (Cosmic Rays) ಅಥವಾ ನಮ್ಮ ಜ್ಞಾನಕ್ಕೆ ಇನ್ನೂ ಬಾರದಿರುವ ಅದಕ್ಕಿಂತಲೂ ತೀಕ್ಷ್ಣವಾದ ಇತರ ಕಿರಣಗಳು. ಹಾಗೆಯೇ ಕೆಲವೊಮ್ಮೆ ಬರಿಗಣ್ಣಿಗೆ ನಕ್ಷತ್ರ ತುಂಡಾಗಿ ವೇಗದೊಂದಿಗೆ ಭೂಮಿಯ ಕಡೆಗೆ ಬೀಳುತ್ತಿರುವಂತೆ ಭಾಸವಾಗುವ ಉಲ್ಕಾಪಾತವೇ ಆಗಿರಲೂಬಹುದು. ಇದು ಶೈತಾನರು ಬಾನಲೋಕದ ಕಡೆಗೆ ಆರೋಹಣ ಮಾಡುವುದಕ್ಕೆ ತಡೆಯಾಗಿ ನಿಲ್ಲುತ್ತವೆ.

19. ನಾವು ಭೂಮಿಯನ್ನು ಹರಡಿದೆವು. ಅದರಲ್ಲಿ ಪರ್ವತಗಳನ್ನು ನಾಟಿದೆವು. ಅದರಲ್ಲಿ ಎಲ್ಲ ಜಾತಿಯ ಸಸ್ಯಗಳನ್ನು ಸರಿಯಾಗಿ ನಿಶ್ಚಿತ ಪ್ರಮಾಣದಲ್ಲಿ ಬೆಳೆಸಿದೆವು.

وَالْأَرْضَ مَدَدْنٰهَا وَأَلْقَيْنَا فِيهَا رَوَاسِيَ وَأَنْۢبَتْنَا فِيهَا مِنْ كُلِّ شَيْءٍ مَّوْزُونٍ ﴿١٩﴾

20. ಮತ್ತು ಅದರಲ್ಲಿ ನಿಮಗಾಗಿಯೂ ನೀವು ಅನ್ನದಾತರಲ್ಲದಂತಹ ಅನೇಕ ಸೃಷ್ಟಿಗಳಿಗೂ ಜೀವನ ಸಾಧನಗಳನ್ನು ಒದಗಿಸಿದೆವು.

وَجَعَلْنَا لَكُمْ فِيهَا مَعَايِشَ وَمَنْ لَّسْتُمْ لَهٗ بِرٰزِقِينَ ﴿٢٠﴾

21. ಯಾವುದೇ ವಸ್ತುವಿನ ಭಂಡಾರ ನಮ್ಮ ಬಳಿ ಇಲ್ಲದಿಲ್ಲ ಮತ್ತು ಯಾವ ವಸ್ತುವನ್ನಾದರೂ ನಾವು ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಮಾತ್ರ ಇಳಿಸುತ್ತೇವೆ.

وَإِنْ مِّنْ شَيْءٍ إِلَّا عِنْدَنَا خَزَآئِنُهٗ وَمَا نُنَزِّلُهٗٓ إِلَّا بِقَدَرٍ مَّعْلُومٍ ﴿٢١﴾

22. ಫಲಪ್ರದವಾದ ಮಾರುತಗಳನ್ನು ನಾವೇ ಕಳುಹಿಸುತ್ತೇವೆ. ಅನಂತರ ಆಕಾಶದಿಂದ ನೀರನ್ನು ಸುರಿಸುತ್ತೇವೆ ಮತ್ತು ನಿಮ್ಮ ದಾಹವನ್ನು ತಣಿಸುತ್ತೇವೆ. ಈ ಸಂಪತ್ತಿನ ಸಂಗ್ರಾಹಕರು ನೀವಲ್ಲ.

وَأَرْسَلْنَا الرِّيٰحَ لَوَاقِحَ فَأَنْزَلْنَا مِنَ السَّمَآءِ مَآءً فَأَسْقَيْنٰكُمُوهُ ۚ وَمَآ أَنْتُمْ لَهٗ بِخٰزِنِينَ ﴿٢٢﴾

23. ಜೀವ ನೀಡುವವರೂ ಮರಣ ನೀಡುವವರೂ ನಾವೇ. ನಾವೇ ಎಲ್ಲರ ವಾರೀಸುದಾರರಾಗುವವರಿದ್ದೇವೆ.[9]

وَإِنَّا لَنَحْنُ نُحْيِۦ وَنُمِيتُ وَنَحْنُ الْوٰرِثُونَ ﴿٢٣﴾

24. ನಿಮ್ಮ ಪೈಕಿ ಈ ಮುಂಚೆ ಗತಿಸಿ ಹೋದವರನ್ನೂ ನಾವು ಬಲ್ಲೆವು ಆ ಬಳಿಕ ಬರುವವರೂ ನಮ್ಮ ಕಣ್ಣ ಮುಂದಿದ್ದಾರೆ.

وَلَقَدْ عَلِمْنَا الْمُسْتَقْدِمِينَ مِنْكُمْ وَلَقَدْ عَلِمْنَا الْمُسْتَأْخِرِينَ ﴿٢٤﴾

25. ನಿಶ್ಚಯವಾಗಿಯೂ ನಿಮ್ಮ ಪ್ರಭು ಅವರೆಲ್ಲರನ್ನೂ ಒಟ್ಟುಗೂಡಿಸುವನು. ಅವನು ಮಹಾ ಧೀಮಂತನೂ ಸರ್ವಜ್ಞನೂ ಆಗಿರುತ್ತಾನೆ.

وَإِنَّ رَبَّكَ هُوَ يَحْشُرُهُمْ ۚ إِنَّهٗ حَكِيمٌ عَلِيمٌ ﴿٢٥﴾

26. ನಾವು ಮಾನವನನ್ನು ಹಳಸಿದ ಮಣ್ಣಿನ ಒಣ ಗಾರೆಯಿಂದ ಸೃಷ್ಟಿಸಿದೆವು.[10]

وَلَقَدْ خَلَقْنَا الْإِنْسٰنَ مِنْ صَلْصٰلٍ مِّنْ حَمَإٍ مَّسْنُونٍ ﴿٢٦﴾

9. ಅರ್ಥಾತ್- ನಿಮ್ಮ ನಂತರ ನಾವೇ ಬಾಕಿಯುಳಿಯುವವರಾಗಿದ್ದೇವೆ. ನಿಮಗೆ ದೊರೆತಿರುವುದೆಲ್ಲವೂ ತಾತ್ಕಾಲಿಕವಾಗಿ ದೊರೆತಿದೆ. ಕೊನೆಗೆ ನಾವು ದಯಪಾಲಿಸಿರುವ ಎಲ್ಲವನ್ನೂ ಹಾಗೆಯೇ ಬಿಟ್ಟು ನೀವು ಬರಿಗೈಯಲ್ಲಿ ಹೊರಡಲಿರುವಿರಿ ಮತ್ತು ಈ ಎಲ್ಲಾ ವಸ್ತುಗಳು ಹಾಗೆಯೇ ನಮ್ಮ ಖಜಾನೆಯಲ್ಲಿ ಬಾಕಿಯುಳಿಯುವುದು.

10. ಮನುಷ್ಯನು ಪ್ರಾಣಿಗಳ ಹಂತದಿಂದ ನಿರಂತರ ಪ್ರಗತಿ ಸಾಧಿಸುತ್ತಾ ಮನುಷ್ಯತ್ವದ ಮಜಲಿಗೆ ಕಾಲಿರಿಸಲಿಲ್ಲ ಎಂಬುದನ್ನು ಕುರ್‌ಆನ್ ಈ ಮೂಲಕ ಸ್ಪಷ್ಟಪಡಿಸುತ್ತದೆ. ಆಧುನಿಕ ಕಾಲದ ಡಾರ್ವಿನ್ ಸಿದ್ಧಾಂತದಿಂದ ಪ್ರಭಾವಿತರಾದ ವ್ಯಾಖ್ಯಾನಕಾರರು ಕುರ್‌ಆನ್‌ನಿಂದ ಅದನ್ನು ಸಾಧಿಸಲು ಪ್ರಯತ್ನಿಸುತ್ತಿದ್ದಾರೆ. ಮನುಷ್ಯನ ಸೃಷ್ಟಿಯ ಆರಂಭ ಭೂಮಿಯ ಮೂಲವಸ್ತುಗಳಿಂದ ಆಗಿದೆ ಎನ್ನುವುದನ್ನು ಅಲ್ಲಾಹನು, 'ಸಲ್‌ಸಾಲಿಮ್ಮಿನ್ ಹಮಯಿಮ್ಮಸ್ನೂನ್' (ಮಣ್ಣಿನ ಒಣಗಾರೆಯಿಂದ) ಎಂದು ವಿವರಿಸಿದ್ದಾನೆ. ನಾದಿದ ಮಣ್ಣಿನಿಂದ ಒಂದು ಗೊಂಬೆಯನ್ನು ತಯಾರಿಸಲಾಯಿತು, ಅದು ಒಣಗಿದ ನಂತರ ಅದಕ್ಕೆ ಆತ್ಮವನ್ನು ಊದಲಾಯಿತು ಎಂದು ಇದರಿಂದ ವ್ಯಕ್ತವಾಗುತ್ತದೆ.

27. ಮತ್ತು ಅದಕ್ಕಿಂತ ಮುಂಚೆ 'ಜಿನ್ನ್'ಗಳನ್ನು (ಯಕ್ಷರನ್ನು) ಅಗ್ನಿಯ ಜ್ವಾಲೆಯಿಂದ ಸೃಷ್ಟಿಸಿದ್ದೆವು.[11]	وَالْجَآنَّ خَلَقْنٰهُ مِنْ قَبْلُ مِنْ نَّارِ السَّمُوْمِ ﴿٢٧﴾
28. ನಿಮ್ಮ ಪ್ರಭು ದೇವಚರರೊಡನೆ, "ನಾನು ಹಳಸಿದ ಮಣ್ಣಿನ ಒಣ ಗಾರೆಯಿಂದ ಒಬ್ಬ ಮಾನವನನ್ನು ಸೃಷ್ಟಿಸುವವನಿದ್ದೇನೆ.	وَاِذْ قَالَ رَبُّكَ لِلْمَلٰٓئِكَةِ اِنِّیْ خَالِقٌۢ بَشَرًا مِّنْ صَلْصَالٍ مِّنْ حَمَاٍ مَّسْنُوْنٍ ﴿٢٨﴾
29. ನಾನು ಅವನನ್ನು ಸಂಪೂರ್ಣಗೊಳಿಸಿ ಅವನೊಳಗೆ ನನ್ನ ಆತ್ಮದಿಂದ ಕೊಂಚ ಊದಿದಾಗ ನೀವೆಲ್ಲರೂ ಅವನ ಮುಂದೆ ಸಾಷ್ಟಾಂಗ ವೆರಗಬೇಕು" ಎಂದು ಹೇಳಿದ ಸಂದರ್ಭವನ್ನು ಸ್ಮರಿಸಿರಿ.	فَاِذَا سَوَّيْتُهٗ وَنَفَخْتُ فِيْهِ مِنْ رُّوْحِيْ فَقَعُوْا لَهٗ سٰجِدِيْنَ ﴿٢٩﴾
30. ಆ ಪ್ರಕಾರ ಎಲ್ಲ ದೇವಚರರೂ ಸಾಷ್ಟಾಂಗವೆರಗಿದರು-	فَسَجَدَ الْمَلٰٓئِكَةُ كُلُّهُمْ اَجْمَعُوْنَ ﴿٣٠﴾
31. 'ಇಬ್‌ಲೀಸ್'ನ ಹೊರತು. ಅವನು ಸಾಷ್ಟಾಂಗವೆರಗುವವರೊಂದಿಗೆ ಸೇರಲು ನಿರಾಕರಿಸಿಬಿಟ್ಟನು.	اِلَّآ اِبْلِيْسَ ؕ اَبٰٓى اَنْ يَّكُوْنَ مَعَ السّٰجِدِيْنَ ﴿٣١﴾
32. ಪ್ರಭು ಕೇಳಿದನು, "ಓ ಇಬ್‌ಲೀಸ್, ನೀನು ಸಾಷ್ಟಾಂಗವೆರಗುವವರೊಂದಿಗೆ ಸೇರದಿರಲು ಕಾರಣವೇನು?"	قَالَ يٰۤاِبْلِيْسُ مَا لَكَ اَلَّا تَكُوْنَ مَعَ السّٰجِدِيْنَ ﴿٣٢﴾
33. ಅವನು (ಹೀಗೆ) ಹೇಳಿದನು: "ನೀನು ಹಳಸಿದ ಮಣ್ಣಿನ ಗಾರೆಯಿಂದ ಸೃಷ್ಟಿಸಿದ ಈ ಮಾನವನಿಗೆ ಸಾಷ್ಟಾಂಗವೆರಗುವುದು ನನ್ನ ಕೆಲಸವಲ್ಲ."	قَالَ لَمْ اَكُنْ لِّاَسْجُدَ لِبَشَرٍ خَلَقْتَهٗ مِنْ صَلْصَالٍ مِّنْ حَمَاٍ مَّسْنُوْنٍ ﴿٣٣﴾
34. (ಆಗ) ಪ್ರಭು, "ಇಲ್ಲಿಂದ ಹೊರಗೆ ನಡೆ. ಏಕೆಂದರೆ ನೀನು ಶಪಿಸಲ್ಪಟ್ಟವನು-	قَالَ فَاخْرُجْ مِنْهَا فَاِنَّكَ رَجِيْمٌ ﴿٣٤﴾
35. ಮತ್ತು ಮುಂದೆ ನಿರ್ಣಾಯಕ ದಿನದ ವರೆಗೂ ನಿನ್ನ ಮೇಲೆ ಅಭಿಶಪನವಿದೆ" ಎಂದನು.	وَّاِنَّ عَلَيْكَ اللَّعْنَةَ اِلٰى يَوْمِ الدِّيْنِ ﴿٣٥﴾
36. (ಆಗ) ಅವನು, "ಓ ನನ್ನ ಪ್ರಭೂ, ಹಾಗಿದ್ದರೆ ಸಕಲ ಮಾನವರೂ ಪುನಃ ಎಬ್ಬಿಸಲ್ಪಡುವ ದಿನದ ವರೆಗೆ ಕಾಲಾವಕಾಶ ನೀಡು" ಎಂದು ಬಿನ್ನವಿಸಿದನು.	قَالَ رَبِّ فَاَنْظِرْنِيْۤ اِلٰى يَوْمِ يُبْعَثُوْنَ ﴿٣٦﴾

11. 'ಸಮೂಮ್' ಎಂದು ಬಿಸಿಗಾಳಿಗೆ ಹೇಳುತ್ತಾರೆ. ಬೆಂಕಿಯನ್ನು ಬಿಸಿಗಾಳಿಯ ಜತೆಗೆ ಸೇರಿಸಿ ವಿವರಿಸಲಾದರೆ ಅದರ ಅರ್ಥ ಬೆಂಕಿಯ ಬದಲು, ತೀಕ್ಷ್ಣ ಆವಿ ಎಂದಾಗುತ್ತದೆ. ಇದರಿಂದ ಜಿನ್ನ್‌ಗಳನ್ನು ಅಗ್ನಿಯಿಂದ ಸೃಷ್ಟಿಸಲಾಗಿದೆ ಎಂದು ಕುರ್‌ಆನಿನಲ್ಲಿ ಹೇಳಲಾಗಿರುವ ಕಡೆಗಳ ಬಗ್ಗೆಯೂ ವ್ಯಾಖ್ಯಾನ ದೊರೆಯುತ್ತದೆ.

37. ಆಗ, ಅಲ್ಲಾಹನು ಹೇಳಿದನು-"ಇದೋ ನಿನಗೆ ಕಾಲಾವಕಾಶವಿದೆ-	قَالَ فَإِنَّكَ مِنَ الْمُنظَرِينَ ﴿٣٧﴾
38. ನಮಗೆ ತಿಳಿದಿರುವ ಆ ನಿಶ್ಚಿತ ಸಮಯದ ವರೆಗೆ."	إِلَىٰ يَوْمِ الْوَقْتِ الْمَعْلُومِ ﴿٣٨﴾
39. ಅವನೆಂದನು, "ಓ ನನ್ನ ಪ್ರಭೂ, ನೀನು ನನ್ನನ್ನು ದಾರಿ ಗೆಡಿಸಿದಂತೆಯೇ ನಾನು ಭೂಮಿಯಲ್ಲಿ ಮನಮೋಹಕಗಳನ್ನುಂಟು ಮಾಡಿ ಎಲ್ಲ ಜನರನ್ನು ದಾರಿಗೆಡಿಸಿ ಬಿಡುವೆನು,	قَالَ رَبِّ بِمَا أَغْوَيْتَنِي لَأُزَيِّنَنَّ لَهُمْ فِي الْأَرْضِ وَلَأُغْوِيَنَّهُمْ أَجْمَعِينَ ﴿٣٩﴾
40. ನೀನು ಆಯ್ದುಕೊಂಡ ದಾಸರನ್ನು ಹೊರತು."	إِلَّا عِبَادَكَ مِنْهُمُ الْمُخْلَصِينَ ﴿٤٠﴾
41. (ಆಗ ಅಲ್ಲಾಹನು ಹೀಗೆ) ಹೇಳಿದನು: "ನೇರವಾಗಿ ನನ್ನನ್ನು ತಲಪುವ ಮಾರ್ಗವಿದು.[12]	قَالَ هَٰذَا صِرَاطٌ عَلَيَّ مُسْتَقِيمٌ ﴿٤١﴾
42. ನಿಶ್ಚಯವಾಗಿಯೂ ನನ್ನ ನಿಷ್ಠಾವಂತ ದಾಸರ ಮೇಲೆ ನಿನ್ನ ಅಧಿಕಾರ ನಡೆಯದು. ನಿನ್ನ ಅಧಿಕಾರವು ನಿನ್ನನ್ನು ಅನುಸರಿಸುವ ಪಥಭ್ರಷ್ಟರ ಮೇಲೆ ಮಾತ್ರ ನಡೆಯುವುದಷ್ಟೆ.[13]	إِنَّ عِبَادِي لَيْسَ لَكَ عَلَيْهِمْ سُلْطَانٌ إِلَّا مَنِ اتَّبَعَكَ مِنَ الْغَاوِينَ ﴿٤٢﴾
43. ನಿಶ್ಚಯವಾಗಿಯೂ ಅವರೆಲ್ಲರಿಗೂ ನರಕದ ವಾಗ್ದಾನವಿದೆ."	وَإِنَّ جَهَنَّمَ لَمَوْعِدُهُمْ أَجْمَعِينَ ﴿٤٣﴾
44. ಈ ನರಕಕ್ಕೆ ಏಳು ದ್ವಾರಗಳಿವೆ. ಪ್ರತಿಯೊಂದು ದ್ವಾರಕ್ಕೆ ಅವರಲ್ಲೊಂದು ಭಾಗವನ್ನು ನಿಗದಿಗೊಳಿಸಲಾಗಿದೆ.[14]	لَهَا سَبْعَةُ أَبْوَابٍ لِّكُلِّ بَابٍ مِّنْهُمْ جُزْءٌ مَّقْسُومٌ ﴿٤٤﴾
45. ಇದಕ್ಕೆ ವ್ಯತಿರಿಕ್ತವಾಗಿ ಕರ್ಮನಿಷ್ಠರು ಉದ್ಯಾನಗಳಲ್ಲಿಯೂ ಚಿಲುಮೆಗಳಲ್ಲಿಯೂ ಇರುವರು.	إِنَّ الْمُتَّقِينَ فِي جَنَّاتٍ وَعُيُونٍ ﴿٤٥﴾
46. ಶಾಂತರಾಗಿಯೂ ನಿರ್ಭಯರಾಗಿಯೂ ಅವುಗಳೊಳಗೆ ಪ್ರವೇಶಿಸಿರೆಂದು ಅವರೊಡನೆ ಹೇಳಲಾಗುವುದು.	ادْخُلُوهَا بِسَلَامٍ آمِنِينَ ﴿٤٦﴾

12. 'ಹಾದಾ ಸಿರಾತುಲ್ ಅಲಯ್ಯ ಮುಸ್ತಕೀಮ್' ಎಂಬುದನ್ನು ಎರಡು ರೀತಿಯಲ್ಲಿ ಅರ್ಥೈಸಬಹುದಾಗಿದೆ. ಒಂದನೆಯದು ನಾವು ಭಾಷಾಂತರದಲ್ಲಿ ಕೊಟ್ಟಿರುವ ಅರ್ಥವಾಗಿದೆ. ಎರಡನೆಯದು, "ಆ ಮಾತು ನಿಜ. ನಾನೂ ಅದಕ್ಕೆ ಬದ್ಧನಾಗಿರುವೆ" ಎಂದಾಗಿದೆ.
13. ಈ ವಾಕ್ಯದ ಅರ್ಥ ಹೀಗೂ ಆಗಬಹುದು, 'ನನ್ನ ದಾಸರ (ಜನಸಾಮಾನ್ಯರ) ಮೇಲೆ ಬಲವಂತದಿಂದ ಅವರನ್ನು ಆಜ್ಞೋಲ್ಲಂಘಕರನ್ನಾಗಿ ಮಾಡುವ ಅಧಿಕಾರ ನಿನಗೆ ಇರಲಾರದು. ಆದರೆ ಸ್ವತಃ ದಾರಿತಪ್ಪಿರುವ ಮತ್ತು ಸ್ವಯಂ ನಿನ್ನ ಅನುಸರಣೆ ಮಾಡಬಯಸುವವರನ್ನು ನಿನ್ನ ಮಾರ್ಗದಲ್ಲಿ ನಡೆಯಲು ಬಿಟ್ಟು ಬಿಡಲಾಗುವುದು. ಅವರನ್ನು ಒತ್ತಾಯಪೂರ್ವಕ ಅದರಿಂದ ತಡೆಯಲು ನಾವು ಪ್ರಯತ್ನಿಸುವುದಿಲ್ಲ.
14. ನರಕದ ಈ ದ್ವಾರಗಳು ಪ್ರಾಯಶಃ ಅವರ ಪಥಭ್ರಷ್ಟತೆ ಮತ್ತು ಪಾಪಗಳಿಗೆ ಅನುಗುಣ ವಾಗಿರುವುದು. ಅವುಗಳ ಮೂಲಕವೇ ವ್ಯಕ್ತಿ ತನ್ನನ್ನು ನರಕಕ್ಕೆ ಅರ್ಹನಾಗಿ ಮಾಡಿಕೊಳ್ಳುವನು. ಉದಾಹರಣೆಗೆ ಕೆಲವರು ನಾಸ್ತಿಕತೆಯ ಮೂಲಕ ನರಕದೆಡೆಗೆ ಸಾಗುತ್ತಾರೆ. ಕೆಲವರು ಕಪಟ ವಿಶ್ವಾಸ, ಬಹುದೇವಾರಾಧನೆ, ಸ್ವೇಚ್ಛಾಚಾರ, ಪಥಭ್ರಷ್ಟತೆ, ಅಕ್ರಮ-ಅನ್ಯಾಯ, ಸೃಷ್ಟಿಗಳಿಗೆ ಉಪದ್ರವ ನೀಡುವ ಪ್ರವೃತ್ತಿ, ಮಿಥ್ಯದ ಪ್ರಚಾರ, ಸತ್ಯನಿಷೇಧದ ಸಂಸ್ಥಾಪನೆ, ಕೆಡುಕು ಮತ್ತು ಅಶ್ಲೀಲತೆಯ ಪ್ರಚಾರ ಇತ್ಯಾದಿ ವಿಭಿನ್ನ ಮಾರ್ಗಗಳನ್ನು ಅನುಸರಿಸುತ್ತಾರೆ. ಒಬ್ಬ ವ್ಯಕ್ತಿಯ ಯಾವ ದುರ್ಗುಣ ಹೆಚ್ಚು ಸುವ್ಯಕ್ತವಿರುವುದೋ ಅದಕ್ಕನುಗುಣವಾಗಿ ನರಕದೆಡೆಗೆ ಸಾಗಲು ಅವನ ಹಾದಿಯನ್ನು ಗೊತ್ತುಪಡಿಸಲಾಗುವುದು.

47. ಅವರ ಹೃದಯಗಳಲ್ಲಿ ಇರಬಹುದಾದ ಅಲ್ಪಸ್ವಲ್ಪ ಕೇಡನ್ನು ನಾವು ತೆಗೆದು ಬಿಡುವೆವು. ಅವರು ಪರಸ್ಪರ ಸಹೋದರರಾಗಿ ಅಭಿಮುಖರಾಗಿ ಆಸನಗಳಲ್ಲಿ ಕುಳಿತುಕೊಳ್ಳುವರು.

وَنَزَعْنَا مَا فِي صُدُورِهِمْ مِنْ غِلٍّ إِخْوَانًا عَلَىٰ سُرُرٍ مُتَقَابِلِينَ ﴿٤٧﴾

48. ಅವರಿಗೆ ಅಲ್ಲಿ ಯಾವತ್ತು ಪರಿಶ್ರಮ ಪಡಬೇಕಾಗಿ ಬರದು ಮತ್ತು ಅವರು ಅಲ್ಲಿಂದ ಹೊರಹಾಕಲ್ಪಡುವುದೂ ಇಲ್ಲ.

لَا يَمَسُّهُمْ فِيهَا نَصَبٌ وَمَا هُمْ مِنْهَا بِمُخْرَجِينَ ﴿٤٨﴾

49. ಓ ಪೈಗಂಬರರೇ, ನಾನು ಮಹಾ ಕ್ಷಮಾಶೀಲನೂ ಕರುಣಾ ನಿಧಿಯೂ ಆಗಿರುತ್ತೇನೆಂದು ನನ್ನ ದಾಸರಿಗೆ ತಿಳಿಸಿಬಿಡಿರಿ.

نَبِّئْ عِبَادِي أَنِّي أَنَا الْغَفُورُ الرَّحِيمُ ﴿٤٩﴾

50. ಇದರೊಂದಿಗೇ ನನ್ನ ಯಾತನೆಯೂ ಅತ್ಯಂತ ವೇದನಾಯುಕ್ತ ವಾಗಿದೆ (ಎಂದೂ ತಿಳಿಸಿ ಬಿಡಿರಿ.)

وَأَنَّ عَذَابِي هُوَ الْعَذَابُ الْأَلِيمُ ﴿٥٠﴾

51. ಇವರಿಗೆ ಇಬ್‌ರಾಹೀಮರ ಅತಿಥಿಗಳ ವೃತ್ತಾಂತವನ್ನೂ ತಿಳಿಸಿರಿ.

وَنَبِّئْهُمْ عَنْ ضَيْفِ إِبْرَاهِيمَ ﴿٥١﴾

52. ಅವರು ಇವರಲ್ಲಿಗೆ ಬಂದು, "ನಿಮಗೆ ಶಾಂತಿ ಇರಲಿ" ಎಂದರು. ಆಗ ಇವರು, "ನಮಗೆ ನಿಮ್ಮ ಬಗೆಗೆ ಹೆದರಿಕೆಯಾಗುತ್ತಿದೆ" ಎಂದರು.

إِذْ دَخَلُوا عَلَيْهِ فَقَالُوا سَلَامًا قَالَ إِنَّا مِنْكُمْ وَجِلُونَ ﴿٥٢﴾ وقف لازم

53. ಆಗ ಅವರು, "ಹೆದರಬೇಡಿರಿ, ನಾವು ನಿಮಗೆ ಓರ್ವ ಮೇಧಾವಿ ಯಾದ ಪುತ್ರನ ಸುವಾರ್ತೆ ನೀಡುತ್ತೇವೆ" ಎಂದರು.[15]

قَالُوا لَا تَوْجَلْ إِنَّا نُبَشِّرُكَ بِغُلَامٍ عَلِيمٍ ﴿٥٣﴾

54. ಇಬ್‌ರಾಹೀಮರು, "ಈ ವೃದ್ಧಾಪ್ಯದಲ್ಲಿ ನೀವು ನನಗೆ (ಮಗನ) ಸುವಾರ್ತೆ ನೀಡುತ್ತೀರಾ? ನೀವೆಂತಹ ಸುವಾರ್ತೆ ನೀಡುತ್ತಿರುವಿ ರೆಂದು ಕೊಂಚ ಯೋಚಿಸಿರಿ" ಎಂದರು.

قَالَ أَبَشَّرْتُمُونِي عَلَىٰ أَنْ مَسَّنِيَ الْكِبَرُ فَبِمَ تُبَشِّرُونَ ﴿٥٤﴾

55. ಆಗ ಅವರು, "ನಾವು ನಿಮಗೆ ಪರಮ ಸತ್ಯವಾಗಿರುವ ಸುವಾರ್ತೆ ನೀಡುತ್ತಿದ್ದೇವೆ- ನೀವು ನಿರಾಶರಾಗಬೇಡಿರಿ" ಎಂದು ಉತ್ತರ ಕೊಟ್ಟರು.

قَالُوا بَشَّرْنَاكَ بِالْحَقِّ فَلَا تَكُنْ مِنَ الْقَانِطِينَ ﴿٥٥﴾

56. ಇಬ್‌ರಾಹೀಮರು, "ತಮ್ಮ ಪ್ರಭುವಿನ ಅನುಗ್ರಹದ ಬಗ್ಗೆ ಪಥಭ್ರಷ್ಟರು ಮಾತ್ರ ನಿರಾಶರಾಗುತ್ತಾರೆ" ಎಂದು ಹೇಳಿ-

قَالَ وَمَنْ يَقْنَطُ مِنْ رَحْمَةِ رَبِّهِ إِلَّا الضَّالُّونَ ﴿٥٦﴾

15. ಅರ್ಥಾತ್- ಹ. ಇಸ್‌ಹಾಕ್‌ರ(ರ) ಜನನದ ಸುವಾರ್ತೆ. ಹೂದ್ ಅಧ್ಯಾಯದಲ್ಲಿ ಈ ಬಗ್ಗೆ ವಿವರಣೆ ನೀಡಲಾಗಿದೆ.

57. "ಓ ದೇವದೂತರೇ, ನೀವು ಯಾವ ಕಾರ್ಯಾಚರಣೆಗಾಗಿ ಬಂದಿರುವಿರಿ?" ಎಂದು ಕೇಳಿದರು.

قَالَ فَمَا خَطْبُكُمْ أَيُّهَا الْمُرْسَلُونَ ﴿٥٧﴾

58. (ಆಗ) ಅವರು, "ನಾವು ಒಂದು ಅಪರಾಧಿ ಜನಾಂಗದ ಕಡೆಗೆ ಕಳುಹಿಸಲ್ಪಟ್ಟಿದ್ದೇವೆ-

قَالُوا إِنَّا أُرْسِلْنَا إِلَىٰ قَوْمٍ مُّجْرِمِينَ ﴿٥٨﴾

59. ಆದರೆ 'ಲೂತ್'ರ ಮನೆಯವರು ಇದಕ್ಕೆ ಹೊರತಾಗಿದ್ದಾರೆ. ಅವರ ಮನೆಯವರೆಲ್ಲರನ್ನೂ ನಾವು ರಕ್ಷಿಸುವೆವು-

إِلَّا آلَ لُوطٍ إِنَّا لَمُنَجُّوهُمْ أَجْمَعِينَ ﴿٥٩﴾

60. 'ಲೂತ್'ರ ಪತ್ನಿಯ ಹೊರತು; ಆಕೆ ಹಿಂದೆ ಉಳಿಯುವವರಲ್ಲಿ ಸೇರಿದವಳೆಂದು ನಾವು ವಿಧಿಸಿದ್ದೇವೆ (ಎಂದು ಅಲ್ಲಾಹನು ಹೇಳುತ್ತಾನೆ)" ಎಂದರು.

إِلَّا امْرَأَتَهُ قَدَّرْنَا إِنَّهَا لَمِنَ الْغَابِرِينَ ﴿٦٠﴾

61. ಅನಂತರ ಆ ದೂತರು ಲೂತರಲ್ಲಿಗೆ ತಲಪಿದಾಗ-

فَلَمَّا جَاءَ آلَ لُوطٍ الْمُرْسَلُونَ ﴿٦١﴾

62. ಅವರು, "ನೀವು ನನಗೆ ಅಪರಿಚಿತರಾಗಿ ತೋರುತ್ತೀರಿ" ಎಂದರು.

قَالَ إِنَّكُمْ قَوْمٌ مُّنكَرُونَ ﴿٦٢﴾

63. ಆಗ ಅವರು, "ಅಲ್ಲ; ಯಾವುದರ ಆಗಮನದ ಬಗ್ಗೆ ಇವರು ಸಂದೇಹ ಪಡುತ್ತಿದ್ದರೋ ಅದನ್ನು ತೆಗೆದುಕೊಂಡು ನಾವು ಬಂದಿದ್ದೇವೆ.

قَالُوا بَلْ جِئْنَاكَ بِمَا كَانُوا فِيهِ يَمْتَرُونَ ﴿٦٣﴾

64. ನಾವು ಸತ್ಯ ಸಹಿತ ನಿಮ್ಮ ಬಳಿಗೆ ಬಂದಿರುತ್ತೇವೆಂದು ನಾವು ನಿಮ್ಮೊಡನೆ ಖಾತ್ರಿಯಾಗಿ ಹೇಳುತ್ತೇವೆ.

وَأَتَيْنَاكَ بِالْحَقِّ وَإِنَّا لَصَادِقُونَ ﴿٦٤﴾

65. ಆದುದರಿಂದ ಇನ್ನು ನೀವು ಸ್ವಲ್ಪ ರಾತ್ರಿ ಉಳಿದಿರುವಾಗಲೇ ನಿಮ್ಮ ಮನೆಯವರನ್ನು ಕರಕೊಂಡು ಹೊರಟು ಹೋಗಿಬಿಡಿರಿ ಮತ್ತು ನೀವು ಸ್ವತಃ ಅವರ ಹಿಂದೆ ಹಿಂದೆಯೇ ನಡೆಯಿರಿ. ನಿಮ್ಮ ಪೈಕಿ ಯಾರೂ ಹಿಂತಿರುಗಿ ನೋಡಬಾರದು. ನಿಮಗೆ ಎತ್ತ ಹೋಗಲು ಆಜ್ಞಾಪಿಸಲಾಗುತ್ತದೋ ಅತ್ತ ನೇರವಾಗಿ ಸಾಗಿರಿ" ಎಂದು ಹೇಳಿದರು.

فَأَسْرِ بِأَهْلِكَ بِقِطْعٍ مِّنَ اللَّيْلِ وَاتَّبِعْ
أَدْبَارَهُمْ وَلَا يَلْتَفِتْ مِنكُمْ أَحَدٌ
وَامْضُوا حَيْثُ تُؤْمَرُونَ ﴿٦٥﴾

66. ಬೆಳಗಾಗುವುದರೊಳಗಾಗಿ ಅವರೆಲ್ಲರ ಮೂಲೋತ್ಪಾಟನಗೊಳಿಸ ಲಾಗುವುದೆಂಬ ನಮ್ಮ ಈ ತೀರ್ಮಾನವನ್ನು ನಾವು ಅವರಿಗೆ ಮುಟ್ಟಿಸಿಬಿಟ್ಟೆವು.

وَقَضَيْنَا إِلَيْهِ ذَٰلِكَ الْأَمْرَ أَنَّ دَابِرَ
هَٰؤُلَاءِ مَقْطُوعٌ مُّصْبِحِينَ ﴿٦٦﴾

67. ಇಷ್ಟರಲ್ಲಿ ನಗರದವರು ಸಂತೋಷದಿಂದ ಮೈ ಮರೆತು ಲೂತರ ಮನೆಗೆ ಧಾವಿಸಿ ಬಂದರು.

وَجَآءَ اَهۡلُ الۡمَدِيۡنَةِ يَسۡتَبۡشِرُوۡنَ ﴿۶۷﴾

68. ಲೂತರು ಹೇಳಿದರು, "ಬಂಧುಗಳೇ, ಇವರು ನನ್ನ ಅತಿಥಿಗಳು- ನನ್ನನ್ನು ಅವಮಾನಿಸಬೇಡಿರಿ.

قَالَ اِنَّ هٰٓؤُلَآءِ ضَيۡفِىۡ فَلَا تَفۡضَحُوۡنِ ۙ﴿۶۸﴾

69. ಅಲ್ಲಾಹನನ್ನು ಭಯಪಡಿರಿ- ನನ್ನನ್ನು ಅಪಮಾನಕ್ಕೀಡು ಮಾಡಬೇಡಿರಿ."

وَاتَّقُوا اللّٰهَ وَلَا تُخۡزُوۡنِ ﴿۶۹﴾

70. ಆಗ ಅವರು, "ಇಡೀ ಲೋಕದ ಗುತ್ತಿಗೆ ಪಡೆಯುವುದು ಬೇಡವೆನ್ನುತ್ತ ನಾವು ಪದೇ ಪದೇ ನಿಮ್ಮನ್ನು ತಡೆಯಲಿಲ್ಲವೇ?" ಎಂದು ಕೇಳಿದರು.

قَالُوۡۤا اَوَلَمۡ نَـنۡهَكَ عَنِ الۡعٰلَمِيۡنَ ﴿۷۰﴾

71. ಲೂತರು (ವಿನಮ್ರತೆಯಿಂದ), "ನಿಮಗೇನಾದರೂ ಮಾಡಲೇಬೇಕೆಂದಿದ್ದರೆ ಇದೋ ಈ ನನ್ನ ಪುತ್ರಿಯರಿದ್ದಾರೆ" ಎಂದು ಹೇಳಿದರು.[16]

قَالَ هٰٓؤُلَآءِ بَنٰتِىۡۤ اِنۡ كُنۡتُمۡ فٰعِلِيۡنَ ؕ﴿۷۱﴾

72. ನಿಮ್ಮ ಜೀವದಾಣೆ! (ಓ ಪೈಗಂಬರರೇ,) ಆಗ ಆ ಜನರು ಮದೋನ್ಮತ್ತರಾಗಿದ್ದರು. ಅದರಿಂದ ಅವರು ಮೈ ಮರೆತಿದ್ದರು.

لَعَمۡرُكَ اِنَّهُمۡ لَفِىۡ سَكۡرَتِهِمۡ يَعۡمَهُوۡنَ ﴿۷۲﴾

73. ಕಟ್ಟಕಡೆಗೆ ಉಷಾಕಾಲವಾದೊಡನೆ ಅವರ ಮೇಲೆ ಒಂದು ಭಯಾನಕ ಸ್ಫೋಟವೆರಗಿತು.

فَاَخَذَتۡهُمُ الصَّيۡحَةُ مُشۡرِقِيۡنَ ۙ﴿۷۳﴾

74. ನಾವು ಆ ನಾಡನ್ನು ಬುಡಮೇಲು ಮಾಡಿ ಬಿಟ್ಟೆವು ಮತ್ತು ಅವರ ಮೇಲೆ ಸುಡುಮಣ್ಣಿನ ಕಲ್ಲುಗಳ ಮಳೆಗರೆದೆವು.

فَجَعَلۡنَا عَالِيَهَا سَافِلَهَا وَاَمۡطَرۡنَا عَلَيۡهِمۡ
حِجَارَةً مِّنۡ سِجِّيۡلٍ ؕ﴿۷۴﴾

75. ಈ ಘಟನೆಯಲ್ಲಿ ವಿಚಾರಶೀಲರಿಗೆ ಉನ್ನತವಾದ ನಿದರ್ಶನಗಳಿವೆ.

اِنَّ فِىۡ ذٰ لِكَ لَاٰيٰتٍ لِّلۡمُتَوَسِّمِيۡنَ ﴿۷۵﴾

76. (ಈ ದುರ್ಘಟನೆ ಸಂಭವಿಸಿದ) ಆ ಪ್ರದೇಶವು ಸಾರ್ವಜನಿಕ ಸಂಚಾರ ಮಾರ್ಗದಲ್ಲೇ ಇದೆ.[17]

وَاِنَّهَا لَبِسَبِيۡلٍ مُّقِيۡمٍ ﴿۷۶﴾

77. ಇದರಲ್ಲಿ ನಿಶ್ಚಯವಾಗಿಯೂ ಸತ್ಯವಿಶ್ವಾಸಿಗಳಿಗೆ ಎಚ್ಚರಿಕೆಯ ಸಾಧನಗಳಿವೆ.

اِنَّ فِىۡ ذٰ لِكَ لَاٰيَةً لِّلۡمُؤۡمِنِيۡنَ ؕ﴿۷۷﴾

16. ವಿವರಣೆಗಾಗಿ ನೋಡಿರಿ. ಅಧ್ಯಾಯ ಹೂದ್, ಟಿಪ್ಪಣಿ-26, 27.

17. ಅರ್ಥಾತ್- ಹಿಜಾಝ್‌ನಿಂದ ಸಿರಿಯಾ ಮತ್ತು ಇರಾಕ್‌ನಿಂದ ಈಜಿಪ್ಟ್‌ಗೆ ಹೋಗುವಾಗ ಈ ವಿನಾಶಕ್ಕೀಡಾದ ಪ್ರದೇಶಗಳು ದಾರಿಯಲ್ಲಿ ಸಿಗುತ್ತವೆ. ಯಾತ್ರಾತಂಡಗಳು ಸಾಮಾನ್ಯವಾಗಿ ವಿನಾಶದ ಪಳಿಯುಳಿಕೆಗಳನ್ನು ನೋಡುತ್ತವೆ. ಇಂದಿಗೂ ಆ ಇಡೀ ಪ್ರದೇಶದಲ್ಲಿ ಅದನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ.

78. 'ಐಕಃ'ದವರು[18] ಅಕ್ರಮಿಗಳಾಗಿದ್ದರು.

وَإِن كَانَ أَصْحَٰبُ ٱلْأَيْكَةِ لَظَٰلِمِينَ ۝٧٨

79. ನಾವು ಅವರ ಮೇಲೂ ಪ್ರತೀಕಾರವೆಸಗಿದೆವು. ಈ ಎರಡೂ ಜನಾಂಗಗಳ ಅವಶೇಷಗಳು ರಾಜ ಮಾರ್ಗದಲ್ಲೇ ಇವೆ.[19]

فَٱنتَقَمْنَا مِنْهُمْ وَإِنَّهُمَا لَبِإِمَامٍ مُّبِينٍ ۝٧٩

80. 'ಹಿಜ್ರ್'ನವರೂ ಸಂದೇಶವಾಹಕರನ್ನು ಸುಳ್ಳಾಗಿಸಿದ್ದರು.

وَلَقَدْ كَذَّبَ أَصْحَٰبُ ٱلْحِجْرِ ٱلْمُرْسَلِينَ ۝٨٠

81. ನಾವು ನಮ್ಮ ನಿದರ್ಶನಗಳನ್ನು ಅವರಿಗೆ ತೋರಿಸಿದೆವು. ಆದರೆ ಅವರು ಅವೆಲ್ಲವನ್ನೂ ಅಲಕ್ಷಿಸುತ್ತಲೇ ಇದ್ದರು.

وَءَاتَيْنَٰهُمْ ءَايَٰتِنَا فَكَانُوا۟ عَنْهَا مُعْرِضِينَ ۝٨١

82. ಅವರು ಪರ್ವತಗಳನ್ನು ಕೊರೆದು ಮನೆಗಳನ್ನು ಮಾಡುತ್ತಿದ್ದರು ಮತ್ತು ತಮ್ಮಷ್ಟಕ್ಕೆ ನಿರ್ಭಯರಾಗಿ ನಿಶ್ಚಿಂತರಾಗಿದ್ದರು.

وَكَانُوا۟ يَنْحِتُونَ مِنَ ٱلْجِبَالِ بُيُوتًا ءَامِنِينَ ۝٨٢

83. ಕಟ್ಟಕಡೆಗೆ ಬೆಳಗಾಗುತ್ತಲೇ ಒಂದು ಪ್ರಚಂಡ ಸ್ಫೋಟವು ಬಂದೆರಗಿತು.

فَأَخَذَتْهُمُ ٱلصَّيْحَةُ مُصْبِحِينَ ۝٨٣

84. ಮತ್ತು ಅವರ ಸಂಪಾದನೆಯು ಅವರ ಯಾವ ಉಪಯೋಗಕ್ಕೂ ಬರಲಿಲ್ಲ.

فَمَآ أَغْنَىٰ عَنْهُم مَّا كَانُوا۟ يَكْسِبُونَ ۝٨٤

85. ನಾವು ಭೂಮಿ-ಆಕಾಶಗಳನ್ನೂ ಅವುಗಳಲ್ಲಿ ಇರುವುದೆಲ್ಲವನ್ನೂ ಪರಮ ಸತ್ಯವಾಗಿಯೇ ವಿನಾ ಸೃಷ್ಟಿಸಲಿಲ್ಲ ಮತ್ತು ತೀರ್ಮಾನದ ಗಳಿಗೆಯು ಖಂಡಿತವಾಗಿಯೂ ಬರಲಿದೆ. ಆದುದರಿಂದ ಓ ಪೈಗಂಬರರೇ, ನೀವು (ಇವರ ಅಸಭ್ಯ ವರ್ತನೆಗೆ ಪ್ರತಿಯಾಗಿ) ಸೌಜನ್ಯ ಪೂರ್ಣ ಕ್ಷಮೆಯೊಂದಿಗೆ ವರ್ತಿಸಿರಿ.

وَمَا خَلَقْنَا ٱلسَّمَٰوَٰتِ وَٱلْأَرْضَ وَمَا بَيْنَهُمَآ إِلَّا بِٱلْحَقِّ ۗ وَإِنَّ ٱلسَّاعَةَ لَءَاتِيَةٌ ۖ فَٱصْفَحِ ٱلصَّفْحَ ٱلْجَمِيلَ ۝٨٥

86. ನಿಶ್ಚಯವಾಗಿಯೂ ನಿಮ್ಮ ಪ್ರಭು ಎಲ್ಲರ ಸೃಷ್ಟಿಕರ್ತನೂ ಸರ್ವಜ್ಞನೂ ಆಗಿರುತ್ತಾನೆ.

إِنَّ رَبَّكَ هُوَ ٱلْخَلَّٰقُ ٱلْعَلِيمُ ۝٨٦

87. ನಾವು ನಿಮಗೆ ಪದೇ ಪದೇ ಪುನರಾವರ್ತಿಸುವ ಸಪ್ತ ಸೂಕ್ತಗಳನ್ನೂ[20] ದಿವ್ಯ ಕುರ್‌ಆನನ್ನೂ ದಯಪಾಲಿಸಿದ್ದೇವೆ.

وَلَقَدْ ءَاتَيْنَٰكَ سَبْعًا مِّنَ ٱلْمَثَانِى وَٱلْقُرْءَانَ ٱلْعَظِيمَ ۝٨٧

18. ಅರ್ಥಾತ್- ಹ. ಶುಐಬ್‌ರ(ಅ) ಸಮುದಾಯಕ್ಕೆ ಸೇರಿದ ಜನರು. 'ಐಕ' ಎಂಬುದು 'ತಬೂಕ್'ನ ಪ್ರಾಚೀನ ಹೆಸರು.

19. ಮದ್‌ಯನ್ ಮತ್ತು ಐಕ ಸಮುದಾಯಗಳ ಪ್ರದೇಶವೂ ಹಿಜಾಝ್‌ನಿಂದ ಸಿರಿಯಾ ಮತ್ತು ಫೆಲಸ್ತೀನ್‌ಗೆ ಹೋಗುವ ಮಾರ್ಗದಲ್ಲೇ ಇದೆ.

20. ಅರ್ಥಾತ್- 'ಫಾತಿಹಾ' ಅಧ್ಯಾಯದ ಸೂಕ್ತಗಳು. ಪ್ರಾಚೀನ ವಿದ್ವಾಂಸರ ಪೈಕಿ ಹೆಚ್ಚಿನವರು ಈ ಬಗ್ಗೆ ಒಮ್ಮತಾಭಿಪ್ರಾಯ ಹೊಂದಿದ್ದಾರೆ.

88. ನಾವು ಅವರಲ್ಲಿರುವ ನಾನಾ ವಿಧದ ಜನರಿಗೆ ಕೊಟ್ಟಿರುವ ಲೌಕಿಕ ಸುಖೋಪಭೋಗಗಳ ಕಡೆಗೆ ನೀವು ಕಣ್ಣೆತ್ತಿಯೂ ನೋಡಬೇಡಿರಿ ಮತ್ತು ಅವರಿಗಾಗಿ ಮರುಗಲೂ ಬೇಡಿರಿ. (ಅವರನ್ನು ಅವರ ಪಾಡಿಗೆ ಬಿಟ್ಟು) ಸತ್ಯವಿಶ್ವಾಸವನ್ನು ಸ್ವೀಕರಿಸುವವರ ಕಡೆಗೆ ಬಾಗಿರಿ.

لَا تَمُدَّنَّ عَيْنَيْكَ إِلَىٰ مَا مَتَّعْنَا بِهِۦٓ
أَزْوَٰجًا مِّنْهُمْ وَلَا تَحْزَنْ عَلَيْهِمْ
وَٱخْفِضْ جَنَاحَكَ لِلْمُؤْمِنِينَ ﴿٨٨﴾

89. (ನಿರಾಕರಿಸುವವರೊಡನೆ) "ನಾನು ಸುಸ್ಪಷ್ಟವಾಗಿ ಎಚ್ಚರಿಕೆ ನೀಡುವವನು" ಎಂದು ಹೇಳಿಬಿಡಿರಿ.

وَقُلْ إِنِّىٓ أَنَا ٱلنَّذِيرُ ٱلْمُبِينُ ﴿٨٩﴾

90-91. ಇದು ತಮ್ಮ ಕುರ್‌ಆನನ್ನು ಛಿನ್ನವಿಚ್ಛಿನ್ನಗೊಳಿಸಿರುವ[21] ಒಡಕುಗಾರರ ಕಡೆಗೆ ನಾವು ಕಳುಹಿಸಿದ್ದಂತಹ ಎಚ್ಚರಿಕೆಯೇ ಆಗಿರುತ್ತದೆ.

كَمَآ أَنزَلْنَا عَلَى ٱلْمُقْتَسِمِينَ ﴿٩٠﴾
ٱلَّذِينَ جَعَلُوا۟ ٱلْقُرْءَانَ عِضِينَ ﴿٩١﴾

92-93. ನಿಮ್ಮ ಪ್ರಭುವಿನಾಣೆ! ಅವರೇನು ಮಾಡುತ್ತಲಿದ್ದರೆಂದು ನಾವು ಅವರೆಲ್ಲರೊಡನೆ ವಿಚಾರಿಸಿಯೇ ತೀರುವೆವು.

فَوَرَبِّكَ لَنَسْـَٔلَنَّهُمْ أَجْمَعِينَ ﴿٩٢﴾
عَمَّا كَانُوا۟ يَعْمَلُونَ ﴿٩٣﴾

94. ಆದುದರಿಂದ ಓ ಪೈಗಂಬರರೇ, ನಿಮಗೆ ಕೊಡಲಾಗುತ್ತಿರುವ ಆದೇಶಗಳನ್ನು ಘಂಟಾ ಘೋಷವಾಗಿ ಸಾರಿ ಬಿಡಿರಿ ಮತ್ತು ಬಹುದೇವವಿಶ್ವಾಸಿಗಳನ್ನು ಕೊಂಚವೂ ಗಣನೆಗೆ ತೆಗೆದು ಕೊಳ್ಳಬೇಡಿರಿ.

فَٱصْدَعْ بِمَا تُؤْمَرُ وَأَعْرِضْ عَنِ
ٱلْمُشْرِكِينَ ﴿٩٤﴾

95. ಆ ಅಪಹಾಸ್ಯ ಮಾಡುವವರನ್ನು ನಿಮ್ಮ ಪರವಾಗಿ ಶಿಕ್ಷಿಸಲು ನಾವು ಸಾಕು.

إِنَّا كَفَيْنَٰكَ ٱلْمُسْتَهْزِءِينَ ﴿٩٥﴾

96. ಅವರು ಅಲ್ಲಾಹನೊಂದಿಗೆ ಇತರರನ್ನು ದೇವನೆನ್ನುತ್ತಾರೆ. ಸದ್ಯವೇ ಅವರಿಗೆ ಗೊತ್ತಾಗಲಿದೆ.

ٱلَّذِينَ يَجْعَلُونَ مَعَ ٱللَّهِ إِلَٰهًا ءَاخَرَ ۚ
فَسَوْفَ يَعْلَمُونَ ﴿٩٦﴾

97. ಅವರಾಡುತ್ತಿರುವ ಅಪವಾದದ ಮಾತುಗಳಿಂದ ನಿಮಗೆ ತುಂಬಾ ಖೇದವಾಗುತ್ತಿದೆ ಎಂಬುದನ್ನು ನಾವು ಬಲ್ಲೆವು-

وَلَقَدْ نَعْلَمُ أَنَّكَ يَضِيقُ صَدْرُكَ
بِمَا يَقُولُونَ ﴿٩٧﴾

ಪ್ರವಾದಿವರ್ಯರು(ಸ), 'ಸಬ್‌ಅನ್ ಮಿನಲ್ ಮಸಾನಿ' ಎಂದರೆ ಸೂರಃ ಫಾತಿಹಾ ಎಂದು ಹೇಳಿರುವುದಾಗಿ ಇಮಾಮ್ ಬುಖಾರಿ(ರ) ಅವರೂ ಎರಡು ಉಲ್ಲೇಖಗಳನ್ನು ನೀಡಿದ್ದಾರೆ.

21. ಅರ್ಥಾತ್- ಕುರ್‌ಆನ್ ನೀಡಲಾಗಿರುವಂತೆ ಅವರಿಗೆ ನೀಡಲಾಗಿದ್ದ ಗ್ರಂಥವನ್ನು ಅವರು ಛಿದ್ರಛಿದ್ರಗೊಳಿಸಿದರು. ಅದರ ಕೆಲವು ಭಾಗವನ್ನು ಅನುಸರಿಸಿದರು, ಕೆಲವನ್ನು ಕಡೆಗಣಿಸಿಬಿಟ್ಟರು.

98. (ಇದಕ್ಕೆ ಪರಿಹಾರವೇನೆಂದರೆ) ನಿಮ್ಮ ಪ್ರಭುವಿನ ಕೀರ್ತನೆಯೊಂದಿಗೆ ಅವನನ್ನು ಸ್ತುತಿಸಿರಿ. ಅವನ ಸನ್ನಿಧಿಯಲ್ಲಿ ಸಾಷ್ಟಾಂಗವೆರಗಿರಿ-

فَسَبِّحۡ بِحَمۡدِ رَبِّكَ وَكُن مِّنَ ٱلسَّٰجِدِينَ ﴿٩٨﴾

99. ಖಂಡಿತವಾಗಿಯೂ ಬಂದೇ ತೀರುವ ಆ ಕೊನೆಯ ಘಳಿಗೆಯ ವರೆಗೂ ನಿಮ್ಮ ಪ್ರಭುವಿನ ದಾಸ್ಯ-ಆರಾಧನೆ ಮಾಡುತ್ತಲಿರಿ.

وَٱعۡبُدۡ رَبَّكَ حَتَّىٰ يَأۡتِيَكَ ٱلۡيَقِينُ ﴿٩٩﴾ ع
